ಕಥೆ

# ಅನುಬಂಧ




ಮಧುರಾ ಕರ್ಣಮ್

ಕಲೆ: ವೆಂಕಟ್ರಮಣ ಭಟ್


'ಭರ್‌ರ್...'ಎಂದು ಆಟೊ ಓಡುತ್ತಿದ್ದಂತೆ ಸಣ್ಣಗೆ ಮಳೆ ಹನಿಯತೊಡಗಿತ್ತು. ಅದು ಬೆಳಗಾವಿಯ ಮಳೆ. ಒಮ್ಮೆ ಶುರುವಾದರೆ 'ಜಿಟಿ ಜಿಟಿ' ಎನ್ನುತ್ತ ಸುರಿಯುತ್ತಲೇ ಇರುತ್ತದೆ... ರಚ್ಚೆ ಹಿಡಿದ ಮಗುವಿನ ಹಾಗೆ. ತುಸು ದೂರದಲ್ಲೇ ಗೋವಾವೇಸನಲ್ಲಿ ಹೊಸದಾಗಿ ಆರಂಭವಾಗಿದ್ದ 'ತಿನಿಸುಕಟ್ಟೆ'ಯಲ್ಲಿ ಇಡ್ಲಿ, ವಡೆ, ದೋಸೆ, ವಡಾಪಾವ್, ಪಾವ್‌ಭಾಜಿ, ಮಿಸಳ್, ಹೋಳಿಗೆ, ಚೈನೀಸ್ ಎಲ್ಲ ವಿಧದ ತಿನಿಸುಗಳ ಸುಗಂಧ ಒಂದುಗೂಡಿ ವಿಶಿಷ್ಟವಾದ ಪರಿಮಳ ಹೊಮ್ಮುತ್ತಿತ್ತು. ಬೆಳಗಾವಿಯ ಸಂಸ್ಕೃತಿಯಂತೆ... ಇದು ಇಲ್ಲಿಯ ಹೊಸ ಆಕರ್ಷಣೆ. ಬಹುತೇಕ ಎಲ್ಲ ತಿಂಡಿಗಳೂ ಒಂದೇ ಕಡೆಗೆ ದೊರಕುತ್ತಿದ್ದುದರಿಂದ ಜನರಿಗೆ ಸಲೀಸಾಗಿತ್ತು. ನಿನ್ನೆ ಗೆಳತಿಯರ ಜೊತೆ ಬಂದು ಸವಿದದ್ದೂ ಆಗಿತ್ತು. ಇಂದು ಯಾರಿಲ್ಲದೇ ಬಿಕೋ ಎನ್ನುತ್ತಿತ್ತು. ಅಂಗಡಿಯ ಶಟರ್‌ಗಳನ್ನು ಸರಸರನೇ ಎಳೆದು ಮುಚ್ಚತೊಡಗಿದ್ದರು. ಏಕೋ ಗೊತ್ತಾಗದೇ ಅಚ್ಚರಿಯ ಚಿಹ್ನೆ ಮೂಡುತ್ತಿದ್ದಂತೆ ಫೋನ್ ರಿಂಗಣಿಸಿತು. ಪೋದ್ದಾರ... ಚಿನ್ನದ ಅಂಗಡಿಯವ, 'ಮೇಡಮ್', ನಿಮ್ಮ ಸರಾ ಇನ್ನೂ ಆಗಿಲ್ರಿ. ಮುಂದಿನ ಸಲಾ ಬಂದಾಗ ವೈರಿ. ಇಲ್ಲದಿದ್ರ ನಾನ ಬೆಂಗಳೂರಿಗೆ ಬಂದ್ರ ತಂದ ಕೊಡ್ತೇನಂತ. ಇಲ್ಲೆ ಬರ್ಲಿಕ್ಕೆ ಹೋಗಬ್ಯಾಡ್ರಿ. ಹರತಾಳ... ಗದ್ಲ ನಡದದ. ಜ್ವಾಕಿ'ಎಂದ. ಬಾಯಿ 'ಹ್ಞೂಂ...' ಎಂದರೂ ಮನ ಹೆದರಿತು. 'ಸ್ವಲ್ಪ ನಿಂದರಸಪಾ' ಎನ್ನುವಷ್ಟರಲ್ಲಿ ಆಟೊದವ ಹೊರಳಿ ಶಹಾಪುರದತ್ತ ಸಾಗಿದ. 'ಇಲ್ಯಾಕ ಹೊಂಟೀದಿ?' ಎಂದು ಗಾಬರಿಯಿಂದ ಜೋರಾಗಿಯೇ ಕೇಳಿದೆ. 'ಗದ್ಲ ಸುರುವಾಗೇತ್ರಿ. ಮೋರ್ಚಾ... ಮೆರವಣಿಗಿ ಬರಾಕತ್ತೇತ್ರಿ. ಕಲ್ಲು ಗಿಲ್ಲು ತೂರಿದ್ರ ತ್ರಾಸರಿ' ಎನ್ನುತ್ತ ಒಂದು ಗಲ್ಲಿಯಲ್ಲಿ ನಿಲ್ಲಿಸಿದ. 'ಖರೇ ಅದ' ಎಂದೆ. ಒಳಗೊಳಗೇ ಅಳುಕಿದ್ದು ನಿಜ.

'ನಾನೂ ಬರ್ತೇನಿ. ಮುಂದಿನ ತಿಂಗಳು ಹೋಗೋಣಂತ' ಎಂದ ಪತಿರಾಯರಿಗೆ 'ನಮ್ಮ ಊರು. ನಾ ಇಪ್ಪತ್ತು ವರ್ಷಗಟ್ಟಲೆ ಇದ್ದು ಬೆಳೆದದ್ದ ಊರು. ನಾ ಒಬ್ಬಾಕಿನ ಆರಾಮ ಹೋಗಿಬರ್ತೇನಿ. ಅಂಜಿಕೇನು? ನೀವಿದ್ದರ ಫ್ರೀ ಆಗೂದುಲ್ಲ. ನಮ್ಮ ಗೆಳತ್ಯಾರ ಜೋಡಿ ಆರಾಮಾಗಿ ಓಡ್ಯಾಡ್ಲಿಕ್ಕಾಗೂದುಲ್ಲ' ಎಂದು ದೊಡ್ಡದಾಗಿ ಬೊಗಳೆ ಬಿಟ್ಟಿದ್ದೆ. ಅವರು ಕೊಂಚ ಮುಖ ಊದಿಸಿಕೊಂಡು 'ಏನರೆ ಮಾಡಕೊ' ಎಂದಿದ್ದರು. ಬೆಳಗಾವಿಗೆ ಗಲಾಟೆಯೇನೂ ಹೊಸದಲ್ಲ. ಗಡಿ ವಿವಾದದ ಜೊತೆಗೆ ಮತ್ತೇನೋ ಸೇರಿಕೊಂಡು ಆಗೀಗ ಗಲಾಟೆಗಳು ಆಗುತ್ತಲೇ ಇದ್ದವು. ಆದರೆ ಇಷ್ಟು ವರ್ಷಗಳಲ್ಲಿ ಒಮ್ಮೆಯೂ ಸಿಕ್ಕಿಹಾಕಿಕೊಂಡಿರಲಿಲ್ಲ. ಅದು ಊರಿನ ಮಧ್ಯಭಾಗದಲ್ಲಿ ನಡೆಯುತ್ತಿತ್ತು. ನಮಗೆ ಮರುದಿನ ಪೇಪರ್‌ನಲ್ಲಿ ವಿಷಯ ತಿಳಿಯುತ್ತಿತ್ತು. ಇಂದು... ಒಬ್ಬಳೇ... ಹೀಗೆ ಸಿಕ್ಕಿಬಿದ್ದೆನೆ? ಎನಿಸಿತು. 'ಮೇಡಮ್, ಮೇನ್ ರೋಡಿಗೆ ಹೋಗಾಕ ಬರಂಗಿಲ್ರಿ. ಎಲ್ಲಾ ಕಡೆ ಗದ್ಲ ಅದ. ಇನ್ನ ಒಳಗಿನ ರಸ್ತೆದಾಗನೂ ಶುರುವಾಗ್ತದ. ನಿಮಗ ಎಲ್ಲಿ ಬಿಡ್ಲಿ ಹೇಳ್ರಿ?' ಎಂದು ನನ್ನತ್ತ ತಿರುಗಿದ. ಇಪ್ಪತ್ತೈದರ ಹರಯದ, ಎಣ್ಣೆಗೆಂಪಿನ, ಚಿಗುರು ಮೀಸೆಯ ಯುವಕ. 'ಇವತ್ತ ತಿರುಗಿ ಬೆಂಗಳೂರಿಗೆ ಹೋಗಬೇಕು. ಟಿಕೇಟು ಬುಕ್